## THE GENERAL EPISTLE OF JUDE.

### ಯೂದನ ಹುದುವಾದ ಪತ್ರಿಕೆಯ ಪೀಠಿಕೆ.

ಈ ಪತ್ರಿಕೆಯನ್ನು ಬರೆದವನು, ತಾನು ಯಾಕೋಬನ ಸಹೋದರನೆಂದು ಹೇಳುತ್ತಾನೆ. (೧. ೧.) ಯಾಕೋಬನ ಸಹೋದರನೆಂಬುವದು, ಅಪೊಸ್ತಲನಾದ ಯಾಕೋಬನ ಸಹೋದರನನ್ನು ಅಲ್ಲ, ಕ್ರಿಸ್ತನ ಸಹೋದರನಾಗಿಯೂ ಯೆರೂಸಲೇಮಿನ ಸಭೆಗೆ ಮೊದಲನೇ ಅಧ್ಯಕ್ಷನಾಗಿಯೂ, ಯಾಕೋಬನ ಪತ್ರಿಕೆ ಎಂಬ ಪತ್ರಿಕೆಯನ್ನು ಬರೆದವನಾಗಿಯೂ ಇದ್ದ ಯಾಕೋಬನ ಸಹೋದರನೆಂದು ತೋರುತ್ತದೆ. (ಗಲಾ. ೧. ೧೯.) ಆದದರಿಂದ ಯಾಕೋಬನ ಹಾಗೆಯೇ ಈ ಪತ್ರಿಕೆಯನ್ನು ಬರೆದ ಯೂದನು ಸಹ ಯೇಸು ಕ್ರಿಸ್ತನ ಸಮ್ಮಂಧಿಕನಾಗಿದ್ದನು. (ಮತ್ತಾ. ೧೩. ೫೫. ವಚನದ ವ್ಯಾಖ್ಯಾನ ನೋಡಬೇಕು.) ಪ್ರಾರಂಭದಲ್ಲಿ ಕ್ರಿಸ್ತನಲ್ಲಿ ವಿಶ್ವಾಸವಿಡದೆ ಇದ್ದ ಈ ಇಬ್ಬರು ಸಹೋದರರೂ (ಯೋಹಾ. ೭. ೫.) ಆತನು ಪರಲೋಕಕ್ಕೆ ಏರಿ ಹೋದ ಮೇಲೆ ಆತನಲ್ಲಿ ವಿಶ್ವಾಸವಿಟ್ಟು ಆತನ ಶಿಷ್ಯರಾಗಿ, ಅಪೊಸ್ತಲರ ಸಂಗಡ ಕೂಡಿ ಕೊಂಡು, (ಅಪೊ. ಕ್ರಿ. ೧. ೧೪.) ಆತನಿಗೆ ಸೇವೆ ಮಾಡುವದಕ್ಕೆ ಉದ್ಯುಕ್ತರಾದರು. (೧ ಕೊರಿ. ೯. ೫.) ಯೂದನು ಅಪೊಸ್ತಲೋದ್ಯೋಗವನ್ನು ಹೊಂದಿದವನಾಗಿದ್ದರೆ, ತನ್ನನ್ನು ಕುರಿತು ಯಾಕೋಬನ ಸಹೋದರನೆಂದು ಹೇಳಲಾರನು. ಬೇರೆ ಅಪೊಸ್ತಲರಿಗೆ ತನ್ನನ್ನು ಪ್ರತ್ಯೇಕ ಮಾಡಿ ಹೇಳಲಾರನು. (೧೭. ವ.)

ಈ ಪತ್ರಿಕೆಯನ್ನು ಯಾರಿಗೆ ಬರೆದನೋ ಅದನ್ನು ನಿಶ್ಚಯವಾಗಿ ಹೇಳುವದಕ್ಕಾಗದು. ಈ ಯೂದನು ಯೆಹೂದ್ಯದೇಶಕ್ಕೆ ಪೂರ್ವ ದಿಕ್ಕಿನಲ್ಲಿರುವ ದೇಶಗಳಲ್ಲಿ ಕ್ರಿಸ್ತನ ರಕ್ಷಣೆಯ ಮಹತ್ವಗಳನ್ನು ಸಾರುತ್ತಾ ಬಂದನೆಂದು ಪಾರಂಪರ್ಯವಾಗಿ ಹೇಳಿ ಕೊಳ್ಳುತ್ತಾರೆ. ಇದು ನಿಜವಾಗಿದ್ದರೆ, ಆ ದೇಶಗಳಲ್ಲಿದ್ದ ಕ್ರೈಸ್ತಸಭೆಗಳಿಗೆ ಯೂದನು ಈ ಪತ್ರಿಕೆಯನ್ನು ಬರೆದಿರುವನೆಂದು ಊಹಿಸ ಬಹುದು. ಕೆಲವರು, ಇದು ಆ ಕಾಲದಲ್ಲಿ ಕಲಹಗಾರರೂ ದೂಷಕರೂ ದುರ್ಮಾರ್ಗರೂ ತುಂಬಿ ಕೊಂಡಿದ್ದ ಪಾಲೆಸ್ತೀನ್ ದೇಶದ ಸಭೆಗಳಿಗೆ ಬರೆಯಲ್ಪಟ್ಟಿತೆಂದು ನೆನಸುತ್ತಾರೆ.

ಈ ಪತ್ರಿಕೆಯು ಬರೆಯಲ್ಪಟ್ಟ ಕಾಲವನ್ನು ಗೊತ್ತಾಗಿ ಹೇಳುವದು ಅಸಾಧ್ಯವಾಗಿದೆ. ಇದರಲ್ಲಿ ಅಣಗಿರುವ ಮತಭ್ರಷ್ಟತ್ವಗಳನ್ನೂ ಸನ್ಮಾರ್ಗಕ್ಕೆ ವಿರೋಧವಾದ ದುಷ್ಕ್ರಿಯೆಗಳನ್ನೂ ಕುರಿತು ಯೋಚಿಸುವಾಗ, ಇದು ಅಪೊಸ್ತಲರ ಜೀವಕಾಲದ ಅಂತ್ಯದಲ್ಲಿ, ಯೆರೂಸಲೇಮು ಪಟ್ಣವು ನಾಶನವಾಗುವದಕ್ಕಿಂತ ಸ್ವಲ್ಪ ಮುಂಚೆ ಬರೆಯಲ್ಪಟ್ಟಿತೆಂದು ತೋರುತ್ತದೆ. ಇದು ಒಂದು ವೇಳೆ ಕ್ರಿ. ತ. ೬೫ನೇ ವರುಷದಲ್ಲಿ ಬರೆಯಲ್ಪಟ್ಟಿತೆಂದು ಉದ್ದೇಶಿಸ ಬಹುದು.

ಭಕ್ತಿಯ ವೇಷವನ್ನು ಧರಿಸಿ ಕೊಂಡು, ಭಕ್ತರನ್ನು ನಯವಚನಗಳಿಂದ, ಅವಿಧೇಯತ್ವ, ಭೋಗಾಸಕ್ತಿ ಮುಂತಾದ ಪಾಪಗಳಲ್ಲಿ ಎಳೆದು ಕೆಡಿಸುವ ಹಾಗೆ ಪ್ರಯತ್ನ ಮಾಡಿದ ಕಳ್ಳಬೋಧಕರಿಗೆ, ಕ್ರಿಸ್ತನ ಭಕ್ತರು ಸ್ಥಳ ಕೊಡದೆ, ಎಚ್ಚರಿಕೆಯಾಗಿ ನಡಿಯ ಬೇಕೆಂದು ಆಜ್ಞಾಪಿಸುವದೇ ಈ ಪತ್ರಿಕೆಯ ಮುಖ್ಯ ತಾತ್ಪರ್ಯವಾಗಿದೆ. ಇದರಲ್ಲಿ ಯೂದನು ಕ್ರಿಸ್ತನ ಭಕ್ತರಿಗೆ ಆಶೀರ್ವಾದವನ್ನೂ ಹುದುವಾದ ಕೆಲವು ಬುದ್ಧಿಮತಿಗಳನ್ನೂ ಹೇಳಿ, (೧—೪. ವ.) ಸುಳ್ಳು ಬೋಧಕರಿಗೆ ಬರುವ ಕಠಿಣ ದಂಡನೆಯನ್ನು ಸೂಚಿಸಿ, (೫—೭. ವ.) ಅವರ ನಡತೆಗಳನ್ನು ವಿವರಿಸಿ, ಸ್ತೋತ್ರದಿಂದ ಪತ್ರಿಕೆಯನ್ನು ಮುಗಿಸುತ್ತಾನೆ. (೮—೨೫. ವ.)

---

## THE GENERAL EPISTLE OF JUDE.

# ಯೂದನ ಹುದುವಾದ ಪತ್ರಿಕೆ.

ಆಶೀರ್ವಾದ; ಕಳ್ಳಬೋಧಕರಿಗೆ ಸಂಭವಿಸುವ ದಂಡನೆ; ಎಚ್ಚರಿಕೆಯಾಗಿಯೂ ಸ್ಥಿರವಾಗಿಯೂ
ನಡಿಯ ಬೇಕೆಂಬ ಕಟ್ಟಳೆಗಳು.

[1]ಯೇಸು ಕ್ರಿಸ್ತನ ದಾಸನೂ, ಯಾಕೋಬನ ಸಹೋದರನೂ, ಆಗಿರುವ ಯೂದನು ತಂದೆಯಾದ
೨ ದೇವರಲ್ಲಿ ಪರಿಶುದ್ಧ ಮಾಡಲ್ಪಟ್ಟಂಥ, ಯೇಸು ಕ್ರಿಸ್ತನಲ್ಲಿ ಕಾಪಾಡಲ್ಪಟ್ಟಂಥ, [2]ಕರೆಯಲ್ಪಟ್ಟವರಿಗೆ— ಕರು
ಣೆಯೂ, ಸಮಾಧಾನವೂ, ಪ್ರೀತಿಯೂ, [3]ನಿಮಗೆ ಹೆಚ್ಚಿಸಲ್ಪಡಲಿ.
೩ ಪ್ರಿಯರೇ, [4]ಹುದುವಾದ ರಕ್ಷಣೆಯ ವಿಷಯವಾಗಿ ನಾನು ನಿಮಗೆ ಬರೆಯ ಪೂರ್ಣ ಜಾಗ್ರತೆ ಮಾಡ
ಲಾಗಿ, [5]ಒಂದು ಸಾರಿ ಪರಿಶುದ್ಧರಿಗೆ ಒಪ್ಪಿಸಲ್ಪಟ್ಟ ವಿಶ್ವಾಸಕ್ಕೋಸ್ಕರ ಹೋರಾಡ ಬೇಕೆಂದು, ನಿಮಗೆ ಬುದ್ಧಿ
೪ ಹೇಳಿ ಬರೆಯುವದಕ್ಕೆ ನನಗೆ ಅಗತ್ಯವಾಯಿತು. ಯಾಕಂದರೆ [6]ಪೂರ್ವದಲ್ಲಿ ಈ ಆಜ್ಞೆನಿರ್ಣಯಕ್ಕೆ ಮುಂ
ಬರೆಯಲ್ಪಟ್ಟ, ಭಕ್ತಿಹೀನರಾದ ಕೆಲವು ಮನುಷ್ಯರು ನಮ್ಮ ದೇವರ ಕೃಪೆಯನ್ನು ಬಂಡುತನಕ್ಕೆ ಮಾರ್ಪಡಿ

---

1. ಗ್ರಂಥಕರ್ತನಾದ ಯೂದನು ಆಶೀರ್ವಾದ ಹೇಳಿ, (೧, ೨. ವ.) ಕಳ್ಳಬೋಧಕರ ಸುಳ್ಳು ಬೋಧನೆಗಳಿಗೆ ಕ್ರಿಸ್ತನ ಭಕ್ತರು ಸ್ಥಳ ಕೊಡದೆ, ಅವುಗಳಿಗೆ ತೊಲಗಿರ ಬೇಕೆಂಬುವದೇ ಈ ಪತ್ರಿಕೆಯ ಗುರಿ ಎಂದು ತಿಳಿಸುತ್ತಾನೆ. (೩, ೪. ವ.) ಅವಿಧೇಯತ್ವ ಬಂಡುತನಗಳಿಗೆ ಸ್ಥಳ ಕೊಟ್ಟ ಇಸ್ರಯೇಲ್ಯರು, ಕೆಟ್ಟು ಹೋದ ದೇವದೂತರು, ಸೊದೋಮು ಗಮೋರಗಳ ಜನರು ಮುಂತಾದವರಿಗೆ ಪ್ರಾಪ್ತಿಸಿದ ದೇವರ ದಂಡನೆಯನ್ನು ಹೇಳಿ ತೋರಿಸಿ, (೫—೮. ವ.) ಕಾಯಿನನು, ಬಿಳಾಮನು, ಕೋರಹನು, ಎಂಬವರ ದುರ್ನಡತೆಗಳಿಗೆ ಸಮಾನ ನಡತೆಯುಳ್ಳ ಇವರ ಕ್ರಿಯೆಗಳಿಗೆ ಎದುರಾಗಿ ಮಿಕಯೇಲನ ದೃಷ್ಟಾಂತವನ್ನು ಸೂಚಿಸಿ, (೯—೧೧. ವ.) ಪ್ರವಾದನೆಯ ವಾಕ್ಯಗಳ ಪ್ರಕಾರವೂ, ಅಪೊಸ್ತಲರ ವಾಕ್ಯದ ಪ್ರಕಾರವೂ, ಅವರ ದುರ್ಮಾರ್ಗತನಕ್ಕೆ ತಕ್ಕ ದಂಡನೆ ಬರುವದು ನಿಶ್ಚಯವೆಂದು ತೋರಿಸಿ, (೧೨—೧೯. ವ.) ಕ್ರಿಸ್ತನ ಭಕ್ತರು ಎಚ್ಚರಿಕೆಯೂ ಸ್ಥಿರವೂ, ಬೇರೊಬ್ಬರನ್ನು ರಕ್ಷಿಸ ತಕ್ಕ ಸಾಧನೆಯೂ ಉಳ್ಳವರಾಗಿ ನಡಿಯ ಬೇಕೆಂದು ಆಜ್ಞಾಪಿಸಿ, (೨೦—೨೩. ವ.) ಸ್ತೋತ್ರದೊಡನೆ ಪತ್ರಿಕೆಯನ್ನು ಮುಗಿಸುತ್ತಾನೆ. (೨೪, ೨೫. ವ.)

2. ಕೆಲವು ಪ್ರತಿಗಳಲ್ಲಿ ಯೇಸು ಕ್ರಿಸ್ತನಿಂದ ಅಥವಾ ಯೇಸು ಕ್ರಿಸ್ತನಿಗಾಗಿ ಕಾಪಾಡಲ್ಪಟ್ಟವರೆಂಬದಾಗಿ ಉಂಟು. (ಯೋಹಾ. ೧೭. ೧೫, ೨೧. ರೋಮಾ. ೧. ೬, ೭. ವಚನಗಳ ವ್ಯಾಖ್ಯಾನ ನೋಡ ಬೇಕು.) ತಂದೆಯಾದ ದೇವರಲ್ಲಿ ಪರಿಶುದ್ಧ ಮಾಡಲ್ಪಟ್ಟವರು ಕ್ರಿಸ್ತನ ಪ್ರಸನ್ನತೆಯ ಮಟ್ಟಿಗೂ ಆತನ ಸ್ವಂತ ಬಾಧ್ಯದ ಸ್ಥಿತಿಯಂತೆ ಕಾಪಾಡಲ್ಪಡುವರು.

3. ಜಲಬುಗ್ಗೆಯಲ್ಲಿ ಹೇರಳವಾದ ನೀರು ಇರುವ ಪ್ರಕಾರ, ಕರುಣಾನಿಧಿಯಾದ ದೇವರ ದಾಸರಿಗೆ ಕರುಣೆಯೂ ಸಮಾಧಾನವೂ ಪ್ರೀತಿಯೂ ಸಂಪೂರ್ಣವಾಗಿ ಹೆಚ್ಚಾಗುತ್ತಾ ಇರುತ್ತವೆ.

4. ಶಿಲುಬೆಯ ಮೇಲೆ ಪ್ರಾಣತ್ಯಾಗ ಮಾಡಿ, ತನ್ನ ದಿವ್ಯ ರಕ್ತದ ಪುಣ್ಯದಿಂದ ಸಂಪಾದಿಸಿದ ರಕ್ಷಣೆಯು ಆತನ ದಾಸರೆಲ್ಲರಿಗೆ ಹುದುವಾಗಿದೆ. ಆದದರಿಂದ ಅದನ್ನು ಅಪೊಸ್ತಲರು ಕ್ರಿಸ್ತನ ಭಕ್ತರಿಗೆ ಒಪ್ಪಿಸಿದ ಪ್ರಕಾರ ಶುದ್ಧವಾಗಿ ಕಾದು ಕೊಳ್ಳಲೂ, ಕಳ್ಳಬೋಧಕರಿಂದ ಅದಕ್ಕೆ ಯಾವ ಆಟಂಕವೂ ಬಾರದಂತೆ ಸಾರ್ವಕಾಲದಲ್ಲಿಯೂ ಭಕ್ತರು ಸಾಧಿಸ ಬೇಕೆಂತಲೂ ಹೇಳಿ ಇದೆ.

5. ಒಂದು ಸಾರಿ ಎಂದರೆ, ಸರ್ವರಿಗೋಸ್ಕರ ಒಂದೇ ಸಾರಿ ಒಟ್ಟಾಗಿ ಎಂಬರ್ಥ. ಹೀಗೆ ಭಕ್ತರು ವಿಶ್ವಾಸಿಸಿ, ಅನುಸರಿಸುವ ಹಾಗೆ, ಒಂದೇ ಸಾರಿ ಒಟ್ಟಾಗಿ ಕೊಡಲ್ಪಟ್ಟದ್ದಕ್ಕೆ ಬೇರೊಂದನ್ನು ಕೂಡಿಸಲೂ, ಒಂದನ್ನು ತೆಗೆದು ಹಾಕಲೂ ಬಾರದು. (ಇಬ್ರೀ. ೯. ೨೮.) ಆ ವಿಶ್ವಾಸವನ್ನೂ ಸತ್ಯ ಬೋಧನೆಗಳನ್ನೂ ಮಾರ್ಪಡಿಸಿ ಬೋಧಿಸುವ ಕಳ್ಳಗುರುಗಳನ್ನು ಎದುರಿಸಿ, ಅವರ ಸಂಗಡ ಧೈರ್ಯವಾಗಿ ಹೋರಾಡ ಬೇಕು.

6. ಇದು ಮೂಲ ಭಾಷೆಯ ಅಭಿಪ್ರಾಯದ ಪ್ರಕಾರ ಈ ಆಜ್ಞೆನಿರ್ಣಯವನ್ನು ಕುರಿತು ಮುಂದಾಗಿ ಬರಿಯಲ್ಪಟ್ಟಿದೆ ಎಂದು ಅರ್ಥವಾಗುತ್ತದೆ. ಅಂತಿಕ್ರಿಸ್ತನ ತಪ್ಪು ಬೋಧನೆಗಳನ್ನು ಬೋಧಿಸುವ ಭಕ್ತಿಹೀನರಿಗೆ ಉಂಟಾಗುವ ಆಜ್ಞೆನಿರ್ಣಯವನ್ನು ಕುರಿತು ಹನೋಕನು ಪ್ರವಾದನೆಯಾಗಿ ತಿಳಿಸಿದನು. (೧೪. ವ.)

ಸುವವರಾಗಿಯೂ, ಒಬ್ಬನೇ ಯಜಮಾನನಾದ ದೇವರನ್ನೂ, ನಮ್ಮ [1]ಕರ್ತನಾದ ಯೇಸು ಕ್ರಿಸ್ತನನ್ನೂ
ಬೊಂಕುವವರಾಗಿಯೂ, [2]ಗೋಪ್ಯವಾಗಿ ಹೊಕ್ಕಿದ್ದಾರೆ.
೫ ಆದರೆ ನೀವು [3]ಒಂದು ಸಾರಿ ತಿಳಿದಾಗ್ಯೂ, ಇದನ್ನು ನಿಮಗೆ ಜ್ಞಾಪಕ ಮಾಡ ಮನಸ್ಸಾಗಿದ್ದೇನೆ; ಏನಂದರೆ—
ಕರ್ತನು ಜನರನ್ನು ಐಗುಪ್ತ ದೇಶದಿಂದ ತಪ್ಪಿಸಿ, [4]ಆ ಮೇಲೆ ವಿಶ್ವಾಸಿಸದವರನ್ನು ನಾಶನ ಮಾಡಿದನು.
೬ ಮತ್ತು, ತಮ್ಮ [5]ಆದಿಸ್ಥಿತಿಯನ್ನು ಕಾಪಾಡದೆ, ಸ್ವಂತ ವಾಸಸ್ಥಾನವನ್ನು ಬಿಟ್ಟ ದೂತರನ್ನು ದೊಡ್ಡ ದಿನದ
೭ ನ್ಯಾಯತೀರ್ವಿಕೆಗೆ ನಿತ್ಯ ಬಂಧನಗಳಲ್ಲಿ ಅಂಧಕಾರದ ಕೆಳಗೆ ಇಟ್ಟಿದ್ದಾನೆ. [6]ಹೀಗೆ ಸೊದೋಮೂ, ಗಮೋ
ರವೂ, ಇವುಗಳ ಸುತ್ತಲಿರುವ ಪಟ್ಣಗಳೂ, ಇವರಿಗೆ ಸಮಾನ ರೀತಿಯಿಂದ ಕೇವಲ ಜಾರರಾಗಿ, [7]ಬೇರೆ ಮಾಂ
ಸಕ್ಕೆ ಕೂಡಿ ಕೊಂಡು, [8]ನಿತ್ಯ ಅಗ್ನಿಯ ಶಿಕ್ಷೆಯನ್ನು ಅನುಭವಿಸಿ, ಮಾದರಿಯಾಗಿ ಎದುರಿಗೆ ಇಡಲ್ಪಟ್ಟವೆ.
೮ ಹೀಗೆಯೇ ಇವರು ಸಹ, ಸ್ವಪ್ನಾವಸ್ಥೆಯವರಾಗಿ, ಮಾಂಸವನ್ನು ಮಲಿನ ಮಾಡಿ, ಒಡೆತನವನ್ನು ಅಲಕ್ಷ್ಯ
೯ ಮಾಡಿ, [9]ಮಹಿಮೆಗಳನ್ನು ದೂಷಿಸುತ್ತಾರೆ. ಆದರೆ ಪ್ರಧಾನ ದೂತನಾದ [10]ಮಿಕಯೇಲನು ಪಿಶಾಚನ ಸಂ
ಗಡ ವ್ಯಾಜ್ಯವಾಡಿ, [11]ಮೋಶೆಯ ಶರೀರಕ್ಕೋಸ್ಕರ ತರ್ಕಿಸುವಾಗ, [12]ದೂಷಣೆಯ ನಿರ್ಣಯವನ್ನು ತರಿಸ

1. ಕಳ್ಳಬೋಧಕರು ಕ್ರಿಸ್ತನ ದೈವತ್ವವನ್ನೂ ಮಹತ್ವವನ್ನೂ ಬೊಂಕುವದರಿಂದ ದೇವರೂ ಕರ್ತನೂ ಆಗಿರುವ ಯೇಸು ಕ್ರಿಸ್ತನೆಂಬ ಒಬ್ಬನೇ ಯಜಮಾನನನ್ನು ಬೊಂಕುವವರಾಗಿದ್ದಾರೆ. (೨ ಪೇತ್ರ. ೨. ೧.)

2. ದೇವರ ಕೃಪೆಯನ್ನು ಕಾಮವಿಕಾರಕ್ಕೆ ಮಾರ್ಪಡಿಸಿ ಯೇಸುವೆಂಬ ಒಬ್ಬನೇ ಕರ್ತನನ್ನು ಬೊಂಕಿ, ದೇವರ ಭಯವೂ ಭಕ್ತಿಯೂ ಇಲ್ಲದೆ ಇರುವ ಕಳ್ಳಬೋಧಕರು ತಮ್ಮ ಸುಳ್ಳು ಬೋಧನೆಗಳಿಂದಲೂ, ನಯ ವಚನಗಳಿಂದಲೂ ಸಭೆಯೊಳಗೆ ಹೊಕ್ಕಿದ್ದಾರೆ. (೨ ಪೇತ್ರ. ೨. ೧. ವಚನದ ವ್ಯಾಖ್ಯಾನ ನೋಡ ಬೇಕು.)

3. ಅವರು ಈ ವಿಷಯಗಳನ್ನು ಮುಂಚೆ ತಿಳಿದಿದ್ದದರಿಂದ ಅವುಗಳನ್ನು ಅವರಿಗೆ ತಿರಿಗಿ ಬೋಧಿಸ ಅವಶ್ಯವಿಲ್ಲದಿದ್ದಾಗ್ಯೂ, ಅವುಗಳನ್ನು ಅವರಿಗೆ ಜ್ಞಾಪಕ ಪಡಿಸ ಬೇಕಾಗಿತ್ತು.

4. ದೇವರು ತನ್ನ ಜನರನ್ನು ರಕ್ಷಿಸಿದ ಸಂಗತಿ ಮೊದಲನೇದಾಗಿದ್ದರೆ, ಅವಿಶ್ವಾಸಿಗಳನ್ನು ನಾಶನ ಮಾಡಿದ್ದು ಎರಡನೇ ಸಂಗತಿಯಾಗಿದೆ. (೧ ಕೊರಿ. ೧೦. ೧—೧೨. ಇಬ್ರೀ. ೩. ೧೬—೧೯. ವಚನಗಳ ವ್ಯಾಖ್ಯಾನ ನೋಡ ಬೇಕು.)

5. ಭಕ್ತಿಹೀನರಾದ ಮನುಷ್ಯರು ಮಾತ್ರವಲ್ಲ, ತಮ್ಮ ಮಹಿಮೆಯಾದ ಆದಿಸ್ಥಿತಿಯನ್ನು ಕಾಪಾಡದೆ ಇದ್ದ ಪರಲೋಕದ ದೂತರು ಸಹ ದಂಡನೆ ಹೊಂದಿದರು. ಅವರು ಪರಲೋಕದಲ್ಲಿ ತಮಗಿದ್ದ ಮಹಿಮೆಯಾದ ಸ್ಥಿತಿಯನ್ನು ಬಿಟ್ಟು, ಅಂಧಕಾರವಾದ ಒಂದು ರಾಜ್ಯವನ್ನು ಉಂಟು ಮಾಡ ಯತ್ನಯಿಸಿದರು. (ಕೊಲೊ. ೧. ೧೩.) ದೇವರು ತಮಗೆ ಕೊಟ್ಟ ಶ್ರೇಷ್ಠತ್ವದಲ್ಲಿ ತೃಪ್ತಿಯಾಗಿರದೆ, ಗರ್ವಕ್ಕೂ ಅತ್ಯಾಶೆಗೂ ಸ್ಥಳ ಕೊಟ್ಟು, ಅಧಿಕವಾದ ಶ್ರೇಷ್ಠತ್ವವನ್ನು ಅಪೇಕ್ಷಿಸಿ, ಕಲಹ ಮಾಡಿದ್ದೇ ಅವರು ಮಾಡಿದ ಪಾಪವೆಂದು ಕೆಲವು ವಿದ್ವಾಂಸರು ನೆನಸುತ್ತಾರೆ.

6. ಅಕ್ರಮ ಮಾಡಿದ ದೂತರು ನರಕದಂಡನೆಯನ್ನು ಹೊಂದಿದ ಪ್ರಕಾರ, ಅಕ್ರಮ ಮಾಡಿದ ಸೊದೋಮು ಗಮೋರಗಳವರು ಬೆಂಕಿ ಗಂಧಕಗಳ ಮಳೆ ಸುರಿದು, ಅದರಿಂದ ಸಮೂಲವಾಗಿ ನಾಶವಾದರು. (ಉತ್ಪ. ೧೮, ೧೯. ಸಂಧಿಗಳು.)

7. ಸೊದೋಮು ಗಮೋರಗಳವರು ವ್ಯಭಿಚಾರ ಮಾಡಿದ್ದಲ್ಲದೆ, ಸ್ವಭಾವವಿರೋಧವಾದ ಪುರುಷಸಂಗಮವನ್ನು ಸಹ ನಡಿಸಿದರು.

8. ಅವರು ಬೆಂಕಿ ಗಂಧಕಗಳಾದ ನರಕದಂಡನೆಯನ್ನು ಹೊಂದಿ, ಅವರ ಪಟ್ಣಗಳ ಸಹಿತವಾಗಿ ಅದೇ ಅಗ್ನಿಯಿಂದ ಸಮೂಲ ನಾಶವಾಗಿ, ಅವುಗಳಿದ್ದ ಸ್ಥಳವು ಜೀವಪ್ರಾಣಿಗಳು ಬದುಕ ಕೂಡದ ಮರಣಸಮುದ್ರವು ಬಂದು ತುಂಬಿ ಕೊಂಡಿತು. ಇದು ಅವರೂ ಅವರಂಥಾ ಭಕ್ತಿಹೀನರೂ ಇನ್ನು ಮೇಲೆ ಹೊಂದುವ ದಂಡನೆಯಾದ ಆರದ ಬೆಂಕಿಗೆ ದೃಷ್ಟಾಂತವಾಗಿದೆ.

9. ಪಾಪಕ್ಕೆ ಇಂಥಾ ದಂಡನೆಯಾದ ದೃಷ್ಟಾಂತಗಳು ಇದ್ದಾಗ್ಯೂ, ವ್ಯರ್ಥವೂ ಅಕ್ರಮವೂ ಆದ ಚಿಂತೆಯುಳ್ಳ ಸ್ವಪ್ನಾವಸ್ಥೆಯವರಾದ ಕಳ್ಳಬೋಧಕರು ದುರಿಚ್ಛೆಯಿಂದ ಮಾಂಸವನ್ನು ಅಶುಚಿ ಮಾಡಿ, ಮೇಲಾದ ಒಡೆತನಗಳನ್ನೂ ಮಹಿಮೆಗಳನ್ನೂ ದೂಷಿಸುತ್ತಾರೆ. (೨ ಪೇತ್ರ. ೨. ೧೦, ೧೧. ವಚನಗಳ ವ್ಯಾಖ್ಯಾನ ನೋಡ ಬೇಕು.)

10. ಮಿಕಯೇಲನೆಂಬವನು ದೇವದೂತರಲ್ಲಿ ಶ್ರೇಷ್ಠವರ್ಗಕ್ಕೆ ಸೇರಿದವನೆಂದು ತೋರುತ್ತದೆ.

11. ಮೋಶೆಯ ಶರೀರವನ್ನು ಮೋವಾಬು ದೇಶದ ಒಂದು ತಗ್ಗಿನಲ್ಲಿ ದೇವರೇ ಹೂಣಿಟ್ಟನು. ಆ ಸ್ಥಳವು ಯಾರಿಗೂ ತಿಳಿಯದೆ ಇತ್ತು. (ದ್ವಿತೀಯ ನ್ಯಾ. ೩೪. ೬.) ದೇವರು ಆ ಶರೀರವನ್ನು ದೇವದೂತರಿಂದ ಹೂಣಿಡ ಮಾಡಿದನು ಎಂದು ಈ ಪತ್ರಿಕೆಯಿಂದ ತೋರುತ್ತದೆ. ಇಸ್ರಯೇಲ್ಯರಿಗೆ ತಮ್ಮ ಅಧಿಪತಿಯನ್ನು ಹೂಣಿಟ್ಟ ಸ್ಥಳವು ತಿಳಿದಿದ್ದರೆ, ಒಂದು ವೇಳೆ ಅವನನ್ನು ಆರಾಧಿಸುವರೆಂದು, ದೇವರು ಅವನ ಶರೀರವನ್ನು ಯಾರಿಗೂ ತಿಳಿಯದ ಹಾಗೆ, ದೇವದೂತರಿಂದ ಹೂಣಿಡಿಸಿದನು. ಪಿಶಾಚನು ಆ ಸ್ಥಳವನ್ನು ತಿಳಿದಿದ್ದರೆ, ತನ್ನ ಕಾರ್ಯಕ್ಕೆ ಅನುಕೂಲವಾಗುವದೆಂದು ಅದನ್ನು ಕುರಿತು ಮಿಕಯೇಲನ ಸಂಗಡ ವ್ಯಾಜ್ಯ ಮಾಡಿರುವನು. ಇದರ ವಿಷಯ ಇಸ್ರಯೇಲ್ಯರಲ್ಲಿ ಪಾರಂಪರ್ಯವಾಗಿ ಒಂದು ಪ್ರಸ್ತಾಪವಿರ ಬಹುದು. ಅದನ್ನು ಪರಿಶುದ್ಧಾತ್ಮನು ಈ ಪತ್ರಿಕೆಯಲ್ಲಿ ಸೂಚಿಸಿರುವದರಿಂದ ಅದರ ನಿಶ್ಚಯವು ತೋರುತ್ತದೆ. ಈ ಪಾರಂಪರ್ಯದ ಮಾತು ಯೆಹೂದ್ಯನಾದ ಯೋನತಾನನೆಂಬವನ ಒಂದು ಗ್ರಂಥದಲ್ಲಿ ಮಾತ್ರ, ಮೋಶೆಯ ಸಮಾಧಿಯನ್ನು ಕಾಯುವದಕ್ಕೆ ಮಿಕಯೇಲನಿಗೆ ಒಂದು ವಿಶೇಷ ಕಟ್ಟಳೆ ಕೊಡಲ್ಪಟ್ಟಿತೆಂದು ಬರೆದದೆ.

12. ಸೈತಾನನಿಗೆ ಭಯ ಪಟ್ಟದ್ದರಿಂದಲ್ಲ, ಸೈತಾನನನ್ನಾದರೂ ದೂಷಿಸುವದು ಒಳ್ಳೇ ಕ್ರಿಯೆ ಅಲ್ಲದ್ದರಿಂದ ಮಿಕಯೇಲನೆಂಬ ದೂತನು ಅವನನ್ನು ದೂಷಿಸದೆ, ಕರ್ತನು ನಿನ್ನನ್ನು ಗದರಿಸಲಿ



೧೦ ಧೈರ್ಯ ಪಡದೆ—ಕರ್ತನು ನಿನ್ನನ್ನು ಗದರಿಸಲಿ, ಅಂದನು. ಆದರೆ ಇವರು, ತಿಳಿಯದವುಗಳನ್ನು ದೂಷಿ
೧೧ ಸ್ವಭಾವದಿಂದ [1]ಬುದ್ಧಿ ಇಲ್ಲದ ಮೃಗಗಳ ಹಾಗೆ ತಿಳಿದವುಗಳಲ್ಲಿ ಕೆಟ್ಟು ಹೋಗುತ್ತಾರೆ. ಅವರಿಗೆ ಅಯ್ಯೋ
ಯಾಕಂದರೆ, ಕಾಯಿನನ ಮಾರ್ಗದಲ್ಲಿ ನಡೆದು, ಬಿಳಾಮನ ಸಂಬಳದ ಮೋಸದಲ್ಲಿ ಮುಣುಗಿ, [2]ಕೋರಹ
ವಿವಾದದಲ್ಲಿ ನಾಶನವಾದರು.
೧೨ ಇವರು ನಿಮ್ಮ ಸಂಗಡ ಊಟ ಮಾಡಿ, ನಿರ್ಭಯವಾಗಿ ತಮ್ಮನ್ನು ಪೋಷಿಸಿ ಕೊಂಡು, ನಿಮ್ಮ ಪ್ರೀ
ಭೋಜನಗಳಲ್ಲಿ [3]ಕಳಂಕಗಳಾಗಿದ್ದು, ಘಾಳಿಗಳಿಂದ ಬಡಿಯಲ್ಪಡುವ ನೀರಿಲ್ಲದ ಮೇಘಗಳೂ [4]ಬಾಡಿದ
೧೩ ಣ್ಣುಳ್ಳ, ನಿಷ್ಫಲವಾದ, ಎರಡನೇ ಸಾರಿ ಸತ್ತ, ಬೇರೊಂದಿಗೆ ಕೀಳಲ್ಪಟ್ಟ ಮರಗಳೂ, [5]ಸ್ವಂತ ನಾಚಿಕೆ ಎಂ
ನೊರೆಯನ್ನು ಕಾರುವ ಸಮುದ್ರದ ಹುಚ್ಚ ತೆರೆಗಳೂ, ಅಲೆಯುವ [6]ನಕ್ಷತ್ರಗಳೂ, ಆಗಿದ್ದಾರೆ. ಅವರಿಗೋ
ಸ್ಕರ ಕಾರ್ಗತ್ತಲು ಎಂದೆಂದಿಗೂ ಇಡಲ್ಪಟ್ಟದೆ.
೧೪ ಇವರನ್ನು ಕುರಿತು [7]ಆದಮನಿಂದ ಏಳನೆಯವನಾದ ಹನೋಕನು ಪ್ರವಾದಿಸಿ, ಹೇಳಿದ್ದೇನಂದರೆ, ಇಗೊ
೧೫ ಕರ್ತನು ಎಲ್ಲರಿಗೆ ನ್ಯಾಯ ತೀರಿಸುವದಕ್ಕೂ, ಭಕ್ತಿಹೀನರೆಲ್ಲರಿಗೆ, ಅವರು ಮಾಡಿದ ಎಲ್ಲಾ ಭಕ್ತಿಹೀ
ಕ್ರಿಯೆಗಳಿಗೋಸ್ಕರವೂ, ಭಕ್ತಿಹೀನರಾದ ಪಾಪಿಷ್ಠರು ಅವನಿಗೆ ವಿರೋಧವಾಗಿ ಆಡಿದ ಎಲ್ಲಾ ಕಠಿಣವಾ
೧೬ ಮಾತುಗಳಿಗೋಸ್ಕರವೂ, [8]ಖಂಡಿಸುವದಕ್ಕೂ, [9]ಅಯುತಾಯುತ ಪರಿಶುದ್ಧರ ಸಂಗಡ ಬರುತ್ತಾನೆ. ಇವ

ಎಂದು ಶಾಂತವಾಗಿ ಹೇಳಿದನು. ಹೀಗೆಯೇ ಕ್ರಿಸ್ತನ ಭಕ್ತರು, ಲೋಕದ ಪ್ರಭುಗಳೂ ಅಧಿಕಾರಿಗಳೂ ಆದವರು ಪಿಶಾಚನ ಮಕ್ಕಳ ಹಾಗೆ ನಡೆದಾಗ್ಯೂ, ಅವರನ್ನು ದೂಷಿಸದೆ ಇರ ಬೇಕು.

1. ಬುದ್ಧಿಯೂ ವಿವೇಕವೂ ಇಲ್ಲದ ಮೃಗಗಳು ತಮ್ಮ ಮಾಂಸದಿಚ್ಛೆಗಳನ್ನು ಈಡೇರಿಸುವ ಪ್ರಕಾರ ಇವರು ಸಹ ತಮ್ಮ ಇಚ್ಛೆಗಳನ್ನು ಈಡೇರಿಸಿ, ತಮ್ಮನ್ನು ಕೆಡಿಸಿ ಕೊಳ್ಳುತ್ತಾರೆ.

2. ಈ ದುರ್ಮಾರ್ಗರ ಕಾರ್ಯವು ಪೂರ್ವದಲ್ಲಿದ್ದ ದುರ್ಮಾರ್ಗರ ಕಾರ್ಯದ ಹಾಗೆಯೇ ಮುಗಿಯುವದು. ಕಾಯಿನನನ್ನು ಕುರಿತು, ೧ ಯೋಹಾ. ೩. ೧೨ಲ್ಲಿಯೂ, ಬಿಳಾಮನ ವಂಚನೆಯನ್ನು ಕುರಿತು, ೨ ಪೇತ್ರ. ೨. ೧೫ಲ್ಲಿಯೂ, ವಿವರಿಸಿರುವದನ್ನು ನೋಡ ಬಹುದು. ಅತ್ಯಾಶೆಯುಳ್ಳ ಕೋರಹನು ಕಲಹ ಮಾಡಿದ್ದರಿಂದ ಆಶ್ಚರ್ಯ ವಿಧವಾಗಿ ನಾಶ ಹೊಂದಿದನು. (ಅಂಕೆ. ೧೬. ಸಂಧಿ.) ಕಾಯಿನನ ಹಾಗೆ ಕೊಲೆಪಾತಕವೂ, ಬಿಳಾಮನ ಹಾಗೆ ದ್ರವ್ಯಾಶೆಯೂ, ಕೋರಹನ ಹಾಗೆ ಕಲಹಗುಣವೂ ಉಳ್ಳ ಈ ದುರ್ಮಾರ್ಗರು ಸಹ ಅವರ ಹಾಗೆಯೇ ನಾಶನವಾಗುವರು.

3. ಕಳಂಕಗಳೆಂಬುವದಕ್ಕೆ ಮೂಲ ಭಾಷೆಯಲ್ಲಿ ನೆಲದಲ್ಲಿ ಮರೆಯಾಗಿರುವ ಬಂಡೆಗಳೆಂಬ[illegible]ಗಿ ಉಂಟು. ಇಂಥಾ ಬಂಡೆಗಳಿಂದ ಸಮುದ್ರಯಾತ್ರಿಕರಿಗೆ ಅಪಾಯ ಸಂಭವಿಸುವ ಪ್ರಕಾರ, ವಂಚಕರಾದ ಗುರುಗಳಿಂದ ಕ್ರೈಸ್ತರಿಗೆ ಅಪಾಯ ಸಂಭವಿಸುವದು. ಪ್ರೀತಿಯ ಹಡಗವು ಆ ಬಂಡೆಗೆ ತಗಲಿ ಒಡೆದು ಹೋಗುವದು. ದೇವರ ಮಂದೆಯನ್ನು ಮೇಯಿಸದೆ, ತಮ್ಮನ್ನೇ ಪೋಷಿಸಿ ಕೊಳ್ಳುತ್ತಾರೆ. (ಎಜೇಕಿ. ೩೪. ೨, ೩.)

4. ಈ ಕಳ್ಳಗುರುಗಳು ನೀರಿಲ್ಲದ ಮೇಘಗಳಿಗೂ, ಬೇರೂ ಎಲೆಯೂ ಫಲವೂ ಇಲ್ಲದ ಮರಗಳಿಗೂ ಸಮಾನವಾಗಿದ್ದಾರೆ. ಸತ್ಯವನ್ನು ಬಿಟ್ಟು ಜಾರಿ ಬಿದ್ದವರಾದದರಿಂದ ಎರಡು ಸಾರಿ ಸತ್ತ ಮರಕ್ಕೆ ಸಮಾನವಾಗಿದ್ದಾರೆ.

5. ಬಿರುಘಾಳಿ ಬಡಿಯುವಾಗ ಸಮುದ್ರದ ತೆರೆಗಳು ಹೆಚ್ಚು ನೊರೆಯನ್ನು ತಳ್ಳುವ ಪ್ರಕಾರ, ಇವರು ನಿಂದೆಗಳನ್ನೇ ವಿಸ್ತಾರವಾಗಿ ಪ್ರಕಟ ಮಾಡುವವರಾಗಿದ್ದಾರೆ. (ಯೆಶಾ. ೫೭. ೨೦.)

6. ಸ್ವಲ್ಪ ಹೊತ್ತು ಕಾಣಿಸಿ ತರುವಾಯ ಮೊಬ್ಬಾಗಿ ಹೋಗುವ ಆಕಾಶಬೆಳಕುಗಳ ಹಾಗೆ, ಮತ್ತೊಬ್ಬರಿಗೆ ದಾರಿ ತೋರಿಸುವವರ ಹಾಗೆಯೂ, ಬೆಳಕಿನ ಹಾಗೆಯೂ ಕಾಣಿಸಿದ ಈ ವಂ ಕರು ದೇವರ ಸನ್ನಿಧಿಯಾದ ಪ್ರಕಾಶವನ್ನು ಬಿಟ್ಟು, ನರಕದ ಕ ಗರ್ತ್ತಲಲ್ಲಿ ನಾಶವಾಗುವರು. ಪರ್ವತ, ತೆರೆ, ಜಲ, ಮ ಮುಂತಾದ ಸೃಷ್ಟಿಯು ಭಕ್ತರಿಗೆ ದೇವರ ಮಹಿಮೆಯನ್ನು ಸ ರುವ ಪ್ರಕಾರ ಭಕ್ತಿಹೀನರಿಗೆ ಅವರ ದಂಡನೆಯನ್ನು ಸಹ ಸಾ ತಿಳಿಸುತ್ತವೆ.

7. ಆದಮನಿಂದ ಏಳನೆಯವನಾದ ಹನೋಕನೆಂದು ಹೇ ರುವದರಿಂದ ಅವನು ಕಾಯಿನನ ಮಗನಾದ ಹನೋಕನಲ್ಲವೆಂದು ತಿಳಿಯ ತಕ್ಕದ್ದು. (ಉತ್ಪ. ೪. ೧೭.) ಆದಮನಿಂದ ಏಳ ಯವನಾದ ಹನೋಕನು ಮರಣ ಹೊಂದದೆ ಪರಲೋಕಕ್ಕೆ ಎ ಲ್ಪಟ್ಟನು. ಅವನು ಹೇಳಿದ ಪ್ರವಾದನೆಯನ್ನು ಕುರಿತು ಮೋ ಯ ಗ್ರಂಥದಲ್ಲಿ ಏನೂ ಇಲ್ಲ. ಆದಾಗ್ಯೂ ಆ ಕಾಲದ ಭಕ್ತಿಹಿ ನರಿಗೆ ನೋಹನ ಹಾಗೆಯೇ ಹನೋಕನು ಸಹ ಪ್ರಸಂಗ ಮಾಡ ವಾಗ ಈ ವಾಕ್ಯವನ್ನು ಪ್ರವಾದನೆಯಾಗಿ ಹೇಳಿರುವನು. ಹನೋ ಕನ ಈ ಪ್ರವಾದನೆಯು ಯೆಹೂದ್ಯರಲ್ಲಿ ಪಾರಂಪರ್ಯವಾಗಿ ಬ ತೆಂದು ತೋರುತ್ತದೆ.

8. ಖಂಡಿಸುವದಕ್ಕೆ ಅಂದರೆ, ಅವರನ್ನು ಅಪರಾಧಿಗಳೆಂದು ತೀರಿಸಿ ಅವರನ್ನು ದಂಡಿಸುವದೇ. ದೇವರಿಗೆ ವಿರೋಧವಾದ ಕ್ರಮಗಳನ್ನು ಮಾಡಿ, ಅಶುದ್ಧ ಮಾತುಗಳನ್ನಾಡುವವರಿಗೆ ದೇ ವರಿಂದ ದಂಡನೆ ಬರುವದು ನಿಶ್ಚಯ.

9. ಇದಕ್ಕೆ ಮೂಲ ಭಾಷೆಯಲ್ಲಿ ಅಯುತಾಯುತ ಪರಿಶುದ್ಧ ಸಂಗಡ ಕರ್ತನು ಬಂದನು ಎಂಬದಾಗಿ ಉಂಟು. (ದ್ವಿತೀಯ ನ್ಯಾ. ೩೩. ೨.) ಭಕ್ತರಿಗೆ ಸೌಖ್ಯವನ್ನೂ, ಭಕ್ತಿಹೀನರಿಗೆ ದಂಡನೆಯನ್ನೂ ಕೊಡುವದಕ್ಕೆ ಕರ್ತನು ಬರುವದು ನಿಶ್ಚಯವಾದದರಿಂದ, ಅದನ್ನು ಕುರಿತ ಪ್ರವಾದನೆಯ ವಾಕ್ಯದಲ್ಲಿ ಭವಿಷ್ಯತ್ಕಾಲಕ್ಕೆ ಭೂತಕಾಲವನ್ನು ಹೇಳಿ ಇದೆ.

ಗುಣುಗುಟ್ಟುವವರೂ, ಅಸಂತುಷ್ಟರೂ, ತಮ್ಮ ಆಶೆಗಳ ಪ್ರಕಾರ ನಡೆಯುವವರೂ, ಆಗಿದ್ದಾರೆ; ಅವರ ಬಾ
ಯಿಯು ಉಬ್ಬಿದ ಮಾತುಗಳನ್ನು ಆಡುತ್ತದೆ; [1]ಲಾಭಕ್ಕೋಸ್ಕರ ಮುಖದಾಕ್ಷಿಣ್ಯವನ್ನು ಮಾಡುತ್ತಾರೆ.
೧೭ ಆದರೆ, ಪ್ರಿಯರೇ, ನೀವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಅಪೊಸ್ತಲರು ಮುಂಚೆ ಹೇಳಿದ ಮಾತುಗ
೧೮ ಳನ್ನು [2]ನೆನಪು ಮಾಡಿ ಕೊಳ್ಳಿರಿ; ಏನಂದರೆ, ಕಡೇ ಕಾಲದಲ್ಲಿ ತಮ್ಮ ಭಕ್ತಿಹೀನವಾದ ಆಶೆಗಳ ಪ್ರಕಾರ
೧೯ ನಡೆದು ಕೊಳ್ಳುವ [3]ಕುಚೋದ್ಯಗಾರರು ಇರುವರೆಂದು, ನಿಮಗೆ ಹೇಳಿದರು. ತಮ್ಮನ್ನು [4]ಬೇರೆ ಮಾಡಿ
ಕೊಳ್ಳುವವರೂ, ಪ್ರಾಣಭಾವದವರೂ, ಆತ್ಮವಿಲ್ಲದವರೂ, ಇವರೇ.
೨೦ ಆದರೆ, ಪ್ರಿಯರೇ, ನೀವು ನಿಮ್ಮ ಅತಿ [5]ಪರಿಶುದ್ಧವಾದ ವಿಶ್ವಾಸದ ಮೇಲೆ ನಿಮ್ಮನ್ನು ಕಟ್ಟಿ ಕೊಂಡು,
೨೧ ಪರಿಶುದ್ಧಾತ್ಮದಲ್ಲಿ [6]ಪ್ರಾರ್ಥಿಸಿ, ನಿತ್ಯಜೀವಕ್ಕೆ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯನ್ನು ಎದುರು
೨೨ ನೋಡುತ್ತಾ, [7]ದೇವರ ಪ್ರೀತಿಯಲ್ಲಿ ನಿಮ್ಮನ್ನು ಕಾಪಾಡಿ ಕೊಳ್ಳಿರಿ. ಮತ್ತು [8]ತಾರತಮ್ಯ ನೋಡಿ, ಕೆಲವ
೨೩ ರನ್ನು ಕರುಣಿಸಿರಿ; ಕೆಲವರನ್ನು [9]ಬೆಂಕಿಯೊಳಗಿಂದ ಎಳೆದು, ಭಯದಿಂದ ರಕ್ಷಿಸಿರಿ. ಮಾಂಸದಿಂದ ಮೈ
ಲಿಗೆಯಾದ ಅಂಗಿಯನ್ನು ಸಹ ಹಗೆ ಮಾಡಿರಿ.
೨೪ [10]ಬೀಳದ ಹಾಗೆ ನಿಮ್ಮನ್ನು ಕಾಪಾಡಿ, ಉಲ್ಲಾಸದಿಂದ ತನ್ನ ಮಹಿಮೆಯ ಸಮ್ಮುಖದಲ್ಲಿ ನಿರ್ಮಲರಾಗಿ
೨೫ ನಿಲ್ಲಿಸ ಶಕ್ತನಾದ, ನಮ್ಮ ರಕ್ಷಕನಾದ, ಒಬ್ಬನೇ ಜ್ಞಾನಿಯಾಗಿರುವ ದೇವರಿಗೆ, ಈಗಲೂ ಸರ್ವ ಯುಗ
ಗಳ ವರಿಗೂ ಮಹಿಮೆಯೂ, ಘನತೆಯೂ, ತ್ರಾಣವೂ, ಅಧಿಕಾರವೂ ಆಗಲಿ. ಆಮೆನ್.

---

1. ಗುಣುಗುಟ್ಟುವವರೂ, (೧ಕೊರಿ. ೧೦. ೧೦.) ದೇವರು ತಮಗೆ ಅನುಗ್ರಹಿಸಿದ ಸ್ಥಿತಿಯನ್ನು ಕುರಿತು ಮೊರೆ ಇಡುವವರೂ, (ಸಾಮ. ೧೯. ೩.) ತಮ್ಮ ಇಚ್ಛೆಗಳ ಪ್ರಕಾರ ನಡಿಯುವವರೂ, (ಎಫೆ. ೨. ೩.) ಉಬ್ಬಿದ ಮಾತುಗಳನ್ನಾಡುವವರೂ ಆಗಿರುವ ಭಕ್ತಿಹೀನರು ಸ್ವಂತ ಲಾಭಕ್ಕಾಗಿ ಮುಖಸ್ತುತಿ ಮಾಡುವರು.

2. (೨ಪೇತ್ರ. ೩. ೧—೩. ವಚನಗಳ ವ್ಯಾಖ್ಯಾನ ನೋಡಬೇಕು.) ಇದರಿಂದ ಪೇತ್ರನ ೨ನೇ ಪತ್ರಿಕೆಯು ಈ ಪತ್ರಿಕೆಗೆ ಮುಂಚೆ ಆದದ್ದೆಂದು ತಿಳಿಯ ಬೇಕು.

3. ದುರ್ಮಾರ್ಗರನ್ನು ದಂಡಿಸುವದಕ್ಕೆ ಸರ್ವಲೋಕನ್ಯಾಯಾಧಿಪತಿಯಾದ ಕ್ರಿಸ್ತನು ಪ್ರತ್ಯಕ್ಷವಾಗುವನೆಂಬ ಸತ್ಯವನ್ನು ಅಲಕ್ಷ್ಯ ಮಾಡಿ, ಕುಚೋದ್ಯ ಮಾಡಿರುವರು. (೨ಪೇತ್ರ. ೩. ೪.)

4. ಕ್ರಿಸ್ತನ ಶರೀರವಾದ ಸಭೆಯನ್ನೂ, ಆತನ ದಾಸರ ಸಂಘವನ್ನೂ ಬಿಟ್ಟು ಅಗಲಿ ಹೋಗುವವರು, (೧ಯೋಹಾ. ೨. ೧೯.) ಪ್ರಾಣಭಾವದವರು, (೧ಕೊರಿ. ೨. ೧೪.) ಆತ್ಮವಿಲ್ಲದವರು, ಇಂಥವರು ಕ್ರಿಸ್ತನನ್ನು ಶೇರಿದವರಲ್ಲ. (ರೋಮಾ. ೮. ೮, ೯.)

5. ತಿಳುವಳಿಕೆಯಿಂದಲೂ ಮನೋತ್ಸಾಹದಿಂದಲೂ ಅನುಸರಿಸುವ ಕ್ರಿಸ್ತನ ವಿಷಯವಾದ ವಿಶ್ವಾಸವು ಅಥವಾ ಸತ್ಯವು ಸಕಲ ಸದ್ಗುಣಗಳಿಗೂ ಆಸ್ಪದವಾಗಿರುತ್ತದೆ.

6. ಪರಿಶುದ್ಧಾತ್ಮನು ಕೃಪೆಯ ಆತ್ಮನಾಗಿಯೂ, ವಿಜ್ಞಾಪನೆಗಳ ಆತ್ಮನಾಗಿಯೂ ಇರುವದರಿಂದ, ದೇವರ ಚಿತ್ತಕ್ಕೆ ಸಮರ್ಪಕವಾದ ಪ್ರಾರ್ಥನೆಗಳನ್ನು ಮಾಡುವವರು ಪರಿಶುದ್ಧಾತ್ಮನಲ್ಲಿ ಪ್ರಾರ್ಥಿಸುವವರಾಗಿರ ಬೇಕು. (ಎಫೆ. ೬. ೧೮.)

7. ದೇವರ ಪ್ರೀತಿ ಎಂಬುವದು ದೇವರಲ್ಲಿಯೂ, ಆತನ ಭಕ್ತರಲ್ಲಿಯೂ ಇಡ ತಕ್ಕ ಪ್ರೀತಿಯನ್ನು ಕುರಿತದ್ದು. ಆ ಪ್ರೀತಿಯಿಂದ ತುಂಬಿರುವ ಹೃದಯವನ್ನು ಅಥವಾ ಮಂದಿರವನ್ನು ಅಶುಚಿ ಮಾಡದೆ, ಶುದ್ಧವಾಗಿರುವಂತೆ ಕಾದು ಕೊಳ್ಳ ಬೇಕು. ಆಗ ಕ್ರಿಸ್ತನು ಪ್ರಸನ್ನನಾಗುವ ಕಾಲದಲ್ಲಿ ಅನುಗ್ರಹಿಸಲ್ಪಡುವ ಕೃಪೆಯಾದ ಪರಮ ಮಹಿಮೆಯು ಸಂಪೂರ್ಣವಾಗಿ ಉಂಟಾಗುವದು.

8. ಇದರಲ್ಲಿ ಜಗಳಗಂಟಿಗರಾದ ಕೆಲವರನ್ನು ಖಂಡಿಸಿರಿ ಎಂಬ ಅರ್ಥವೂ, ಕೆಲವು ಬಲಹೀನರನ್ನು ನೋಡಿ ಅವರನ್ನು ಕರುಣಿಸಿ ಮನ್ನಿಸಿರಿ ಎಂಬ ಅರ್ಥವೂ ತೋರುತ್ತದೆ.

9. ಬೆಂಕಿಯಿಂದ ಉಂಟಾಗುವ ಅಪಾಯದ ಹಾಗೆ ಈ ಭಕ್ತಿಹೀನರಿಗೂ ಅಧಿಕ ಅಪಾಯ ಉಂಟಾಗಿದ್ದದರಿಂದ ಹೀಗೆ ಹೇಳಿ ಇದೆ. (ಜೆಕ. ೩. ೨.) ಮಿಕ್ಕಾದವರು ಈ ಅಪಾಯಕ್ಕೆ ತಪ್ಪಿಸಿಕೊಳ್ಳುವಂತೆ ಯತ್ನ ಮಾಡುವವರು ತಾವೇ ಅವರ ದುಷ್ಕರ್ಮಗಳಿಗೆ ಸ್ವಲ್ಪವಾದರೂ ಒಳಬೀಳದೆ ಇರ ಬೇಕು.

10. ಇದರಲ್ಲಿ ಅಡಗಿರುವ ದೇವರ ಸ್ತೋತ್ರವು, ಅಪೊಸ್ತಲನಾದ ಪೌಲನು ರೋಮಾಯರಿಗೆ ಬರೆದ ಪತ್ರಿಕೆಯಲ್ಲಿರುವ ಸ್ತೋತ್ರಕ್ಕೆ ಸ್ವಲ್ಪ ಸಮವಾಗಿದೆ. (ರೋಮಾ. ೧೬. ೨೫—೨೭.) ಭಕ್ತರು ಉತ್ತಮ ವಿಶ್ವಾಸದಿಂದ ಸರ್ವಶಕ್ತಿಯುಳ್ಳ ದೇವರ ಕೈಯನ್ನು ಹಿಡಿದಿರುವ ಮಟ್ಟಿಗೂ ಬೀಳಲಾರರು. (ಕೀರ್ತ. ೯೪. ೧೮.)

# THE REVELATION OF ST. JOHN THE DIVINE.

## ಯೋಹಾನನಿಗಾದ ದಿವ್ಯ ಪ್ರಕಟಣೆಯ ಪೀಠಿಕೆ.

ಈ ಗ್ರಂಥಕ್ಕೆ ಪ್ರಕಟಣೆ ಎಂಬ ವಿಶೇಷವಾದ ಹೆಸರುಂಟು. ಮರೆಯಾಗಿರುವ ಪರಮ ರಹಸ್ಯಗಳನ್ನು ನಮ್ಮ ಕರ್ತನಾದ ಯೇಸು ರಕ್ಷಕನು ತನಗೆ ಪ್ರಿಯನಾದ ಯೋಹಾನನಿಗೆ ಪ್ರಕಟ ಮಾಡಿದ ಕಾರಣದಿಂದ ಇದಕ್ಕೆ ಈ ಹೆಸರು ಉಂಟಾಯಿತು. (ರೋಮಾ. ೧೬. ೨೫—೨೬.) ೯೪ನೇ ಅಥವಾ ೯೫ನೇ ವರುಷದಲ್ಲಿ ರೋಮಾಯ ಚಕ್ರವರ್ತಿಯಾದ ದೋಮಿಷ್ಯನ್ ಕೈಸರನು ಧೊರೆತನ ಮಾಡುವಾಗ ಕ್ರೈಸ್ತರಿಗೆ ಸಂಭವಿಸಿದ ಉಪದ್ರದಲ್ಲಿ ಅಪೊಸ್ತಲನಾದ ಯೋಹಾನನನ್ನು ಹಿಡಿದು, ಒಬ್ಬ ಅಪರಾಧಿಯ ಹಾಗೆ ನೀರಿನ ಮೇಲೆ ಕಳುಹಿಸಿ ಬಿಡ ಬೇಕೆಂದು ಅರಸನ ಅಪ್ಪಣೆಯಾಯಿತು. ಆ ಅಪ್ಪಣೆಯ ಪ್ರಕಾರ ಯೋಹಾನನು ಏಜಿಯನ್ ಸಮುದ್ರದಲ್ಲಿರುವ ಪಾತ್ಮೊಸ್ ದ್ವೀಪದಲ್ಲಿ ಲೋಹಗಳನ್ನು ತೆಗೆಯುವ ಸುರಂಗಗಳಲ್ಲಿ ಕೆಲಸ ಮಾಡಿ ಕೊಂಡಿದ್ದನೆಂದು ಹೇಳಿ ಇದೆ. ಹೀಗಿರುವ ಕಾಲದಲ್ಲಿ ಅವನಿಗೆ ಈ ಪರಮ ದರ್ಶನ ಉಂಟಾಯಿತು. ಈ ಗ್ರಂಥವು ೯೬ನೇ ವರ್ಷದಲ್ಲಿ ಬರಿಯಲ್ಪಟ್ಟಿತೆಂದು ಊಹಿಸ ಬಹುದು.

ತಿರುಸಭೆಗೆ ಮಹೋಪದ್ರವು ಸಂಭವಿಸುವದೆಂದೂ, ಕ್ರಿಸ್ತನ ಭಕ್ತರಲ್ಲಿ ಅನೇಕರು ಸತ್ಯ ಮಾರ್ಗದಿಂದ ಜಾರಿ ಬೀಳುವರೆಂದೂ, ಪರಮ ಗುರುವಾದ ಕ್ರಿಸ್ತನೂ ಆತನ ದಾಸರಾದ ಅಪೊಸ್ತಲರೂ ಪ್ರವಾದನೆಯಾಗಿ ಹೇಳಿದ್ದರು. (ಮತ್ತಾ. ೨೪. ೧೧—೧೩. ೨ಥೆಸ್ಸ. ೨. ೩. ೨ಪೇತ್ರ. ೨. ೧, ೨; ೩. ೩.) ಲೋಕದಲ್ಲಿ ಸಂಭವಿಸುವ ಮುಖ್ಯವಾದ ಮತಭ್ರಷ್ಟತ್ವವನ್ನು ಕುರಿತೂ, ಅದರ ಕಾರಣ, ಲಕ್ಷಣ, ತತ್ಕಾಲ ವೃದ್ಧಿ, ಕಡೆಯಲ್ಲಿ ಅದಕ್ಕೆ ಸಂಭವಿಸುವ ನಾಶ ಮುಂತಾದ ವಿಷಯಗಳನ್ನು ಕುರಿತೂ, ಪೂರ್ವಿಕ ಕ್ರೈಸ್ತರು ಒಂದು ಪ್ರಕಾರ ತಿಳಿದಿದ್ದಾಗ್ಯೂ, ಅವರು ಎದುರು ನೋಡದೆ ಇದ್ದದ್ದೂ, ತರುವಾಯ ಸಂಭವಿಸುವಂಥಾದ್ದೂ ಆದ ಕಾರ್ಯಗಳಿಗೆ ಅವರು ಒಂದಾವರ್ತಿ ಆಯತ್ತರಾಗುವ ಉದ್ದೇಶ್ಯ[illegible] ಅವರಿಗೆ ತಕ್ಕ ಆಲೋಚನೆಗಳೂ ಜ್ಞಾನವೂ ಆಗಾಗ್ಯೆ ಬೇಕಾಗಿದ್ದವು. ಕ್ರಿಸ್ತನ ಭಕ್ತರು ಸತ್ಯ ಮಾರ್ಗವನ್ನು ಅನುಸರಿಸಿದ್ದ ಕಾರಣ ಅವರಿಗೆ ಆಗಾಗ್ಯೆ ಕಠಿಣ ಉಪದ್ರಗಳು ಸಂಭವಿಸಿದವು. ಅಲ್ಪ ಸಂಖ್ಯೆಯುಳ್ಳವರೂ ಬಲಹೀನರೂ ಆಗಿದ್ದ ಅವರು ಸಮೂಲವಾಗಿ ನಾಶವಾಗುವದಾಗಿದ್ದರು. ಇಂಥಾ ಉಪದ್ರವೂ ಹೋರಾಟವೂ ಉಳ್ಳ ಸ್ಥಿತಿಯಲ್ಲಿದ್ದ ಅವರಿಗೆ ಈ ಗ್ರಂಥದಲ್ಲಿರುವ ಬುದ್ಧಿಬೋಧನೆಗಳೂ ದಿವ್ಯ ಜ್ಞಾನವೂ ಅಧಿಕ ಆದರಣೆಯನ್ನು ಕೊಡ ತಕ್ಕವುಗಳಾಗಿದ್ದವು. ಆ ಕಾಲದಲ್ಲಿ ಮಾತ್ರವಲ್ಲ, ಎಲ್ಲಾ ಕಾಲಗಳಲ್ಲಿಯೂ, ಸಭೆಗೂ ಲೋಕಕ್ಕೂ, ಅಥವಾ ಬೆಳಕಿಗೂ ಕತ್ತಲೆಗೂ ನಡೆಯುವ ಆತ್ಮಿಕವಾದ ಹೋರಾಟಕ್ಕೆ, ಈ ಗ್ರಂಥವು ಒಂದು ದಿವ್ಯಾಯುಧದ ಹಾಗೆ ಬಹಳ ಉಪಯೋಗವುಳ್ಳದ್ದಾಗಿದೆ. ನಾನಾವಿಧ ಶೋಧನೆಗಳನ್ನೂ, ಉಪದ್ರಗಳನ್ನೂ ಅನುಭವಿಸುವ ಕ್ರೈಸ್ತಭಕ್ತರ ವಿಶ್ವಾಸವು ಸ್ಥಿರ ಪಡುವದಕ್ಕೂ, ನಂಬಿಕೆ ದೃಢವಾಗುವದಕ್ಕೂ, ಈ ಗ್ರಂಥದಲ್ಲಿರುವ ಬೋಧನೆಗಳು ಬಹಳ ತಕ್ಕವುಗಳಾಗಿವೆ. ಲೋಕದಲ್ಲಿ ಸಂಭವಿಸುವ ಸಮಸ್ತ ಕಾರ್ಯಗಳೂ ಕ್ರಿಸ್ತನ ರಾಜ್ಯವು ಪೂರ್ಣವಾಗಿ ಸ್ಥಾಪಿಸಲ್ಪಡುವದಕ್ಕೂ, ಆತನ ಸಭೆಯು ನಿತ್ಯ ಮಹಿಮೆ ಹೊಂದಿದ್ದಾಗಿ ತೋರುವದಕ್ಕೂ ಹೇತುವೆಯಾಗಿ, ಮುಗಿಯುವವೆಂದು ನಿಶ್ಚಯಿಸಿರುವ ಕ್ರಿಸ್ತನ ಭಕ್ತರ ನಂಬಿಕೆಯು ದೃಢವಾಗದೆ ಇರಲಾರದು.

ಲೋಕಾಂತ್ಯದ ವರಿಗೂ ಸಲ್ಲುವಂಥ ಪ್ರವಾದನೆಗಳು ಅಡಗಿರುವ ಈ ಗ್ರಂಥವು ದೇವರ ನಿರ್ಣಯವನ್ನು ತೋರಿಸುವ ಕಡೇ ಪ್ರಕಟಣೆ ಎಂದು ಹೇಳ ಬಹುದು. ಇನ್ನು ಮೇಲೆ ಇಂಥಾ ಪ್ರಕಟಣೆಯು ಕೊಡಲ್ಪಡುವದೆಂದು ನೆನಸುವದಕ್ಕೆ ಹೇತುವೆ ಇಲ್ಲ. ಇದು ಕಡೇದಾದ ದಿವ್ಯ ಪ್ರಕಟಣೆಯಾಗಿಯೂ, ಪ್ರವಾದನಾವಾಕ್ಯಗಳ ಪೂರ್ಣತೆಯಾಗಿಯೂ ಇರುತ್ತದೆ. ದೇವರ ನಿಜ ಸಭೆಯು, ಲೋಕದ ಕಡೇ ಯುಗವಾದ ಅಂತ್ಯಕಾಲದಲ್ಲಿ ಪ್ರಬಲವಾಗುವಂಥಾದ್ದಾಗಿಯೂ, ಕ್ರಿಸ್ತನ ಮಹಿಮೆಯ ಪ್ರಸನ್ನತೆಯನ್ನೂ, ಆತನ ದಾಸರು ಹೊಂದಲಿಕ್ಕಿರುವ ಪರಮ ಪದವಿಯನ್ನೂ, ಆಸಕ್ತಿಯಿಂದ ಎದುರು ನೋಡುವಂಥಾದ್ದಾಗಿಯೂ ಇರುತ್ತದೆ. ಈ ಗ್ರಂಥಕ್ಕೆ ಸತ್ಯವೇದದ ಮುದ್ರೆ ಎಂಬ ಹೆಸರು ತಕ್ಕದ್ದಾಗಿದೆ. ವೇದದ ಮೊದಲನೇ ಗ್ರಂಥವಾದ ಉತ್ಪತ್ತಿ ಎಂಬ ಪುಸ್ತಕದಲ್ಲಿ ಮನುಷ್ಯರು ಪರದೈಸನ್ನು ಕಳಕೊಂಡದ್ದೂ, ಕಡೇ ಗ್ರಂಥವಾದ ಈ ಪ್ರಕಟಣೆಯ ಪುಸ್ತಕದಲ್ಲಿ ಅವರು ಪರದೈಸನ್ನು ತಿರಿಗಿ ಹೊಂದಿದ್ದೂ ತೋರಿಸಿ ಇದೆ.

ಈ ಗ್ರಂಥದ ಪ್ರವಾದನೆಯ ಭಾಗದಲ್ಲಿ ಉಪಮಾನಗಳೂ ಉಪಮೆಗಳೂ ತುಂಬಿರುವದರಿಂದ ಅವುಗಳ ತಾತ್ಪರ್ಯವನ್ನು ಒಂದಾವರ್ತಿ ತಿಳಿದು ಕೊಳ್ಳದೆ ಇದ್ದರೆ, ಈ ಗ್ರಂಥದ ಬೋಧನೆಯ ತಾತ್ಪರ್ಯವು ತಿಳಿಯಲಾರದು. ಈ ಉಪಮಾನಗಳಲ್ಲಿ ಅನೇಕವು ಹಳೇ ಒಡಂಬಡಿಕೆಯಲ್ಲಿರುವವುಗಳಿಗೆ ಹೋಲಿಕೆಯಾಗಿವೆ. ಇವುಗಳಲ್ಲಿ ಕೆಲವುಗಳ ತಾತ್ಪರ್ಯವನ್ನು ಸರ್ವಜ್ಞನಾದ ಕ್ರಿಸ್ತನೂ, ಆತನ ಸೇವಕರಾದ ದೇವದೂತರೂ ವಿವರಿಸಿರುವದನ್ನು ನೋಡ ಬಹುದು. ಈ ಗ್ರಂಥದಲ್ಲಿ ಅಡಗಿರುವ ಪ್ರವಾದನೆಗಳ ಜ್ಞಾನಾಭಿಪ್ರಾಯವನ್ನು ಗ್ರಹಿಸಿ ಕೊಳ್ಳುವದಕ್ಕೆ ಇದು ಉತ್ತಮ ಬಗೆಯಾಗಿದೆ. ಇದಲ್ಲದೆ ಇದರಲ್ಲಿ ಅಡಗಿರುವ ಉಪಮಾನಗಳ ಸ್ವಭಾವವನ್ನು ಯೋಚಿಸ ಬೇಕಾದದ್ದು ಬಹು ಅವಶ್ಯವಾಗಿದೆ. ಹೀಗೆ ಯೋಚಿಸುವದರಿಂದ ಉಪಮಾನಕ್ಕೂ ಅದರಿಂದ ಸೂಚಿಸಲ್ಪಟ್ಟ ಅರ್ಥಕ್ಕೂ ಒಂದು ಸಮ್ಮಂಧವಿರುವದನ್ನು ಕಾಣ ಬಹುದು. ದೃಷ್ಟಾಂತವಾಗಿ, ಅಧಿಕಾರವನ್ನು ಕಿರೀಟಕ್ಕೂ, ಮಹಿಮೆಯನ್ನು ರತ್ನಕ್ಕೂ, ಕ್ರೂರತ್ವವನ್ನು ದುಷ್ಟ ಮೃಗಕ್ಕೂ, ಉಪ